ಕೃಷ್ಣರಾಜಪೇಟೆ ತಾಲ್ಲೂಕಿನ ಸಂತೇಬಾಚನಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕ

೬೫೯. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲು ನಿಗದಿ ಪಡಿಸಿರುವ ನಿಯಮಗಳೇನು?

ಆ) ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಕಾಲದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು ಸಂತೇಬಾಚನಹಳ್ಳಿಯಲ್ಲಿ ಸ್ಥಾಪನೆಯಾದ ಆಸ್ಪತ್ರೆ ಇನ್ನು ಪ್ರಾಥಮಿಕ ಆರೋಗ್ಯ ಘಟಕವಾಗಿ ಉಳಿದಿರಲು ಕಾರಣವೇನು?

ಇ) ಈ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಈ) ಸುತ್ತಮುತ್ತಲ ೫೦ ಹಳ್ಳಿಗೆ ಆಧಾರವಾಗಿರುವ ಈ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಯೋಜನೆಯನ್ನು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಮತ್ತು ಆ) ಭಾರತ ಸರ್ಕಾರದ ಹಿಂದಿನ ಮಾರ್ಗ ಸೂಚಿಯ ಪ್ರಕಾರ ಪ್ರತಿ ೮೦,೦೦೦ ರಿಂದ ೧,೦೦,೦೦೦ ದವರೆಗಿನ ಜನಸಂಖ್ಯೆಗೆ ಒಂದರಂತೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗುತ್ತಿದೆ. ಮತ್ತು ಒಂದು ಲಕ್ಷಕ್ಕೂ ಮೇಲ್ಪಟ್ಟ ಜನಸಂಖ್ಯೆಯಿದ್ದ ಒಂದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದಂತಹ ತಾಲ್ಲೂಕುಗಳಿಗೆ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದಾಗಿದೆ. ೩೦,೦೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಭಾರತ ಸರ್ಕಾರವು ಈಗ ಸೂಚಿಸಿದೆ.

ಇ) ಕೆ. ಆರ್. ಪೇಟೆ ತಾಲ್ಲೂಕಿನಲ್ಲಿ ಹಾಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುವುದರಿಂದ ಸಂತೇಬಾಚನಹಳ್ಳಿಗೆ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗಿಲ್ಲ, ಅದುದರಿಂದ ಈ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲಾಗಿದೆ.

ಈ) ಮುಂಬರುವ ವರ್ಷಗಳಲ್ಲಿ ಇದನ್ನು ಪರಿಶೀಲಿಸಲಾಗುವುದು.

ಶ್ರೀ ಕೃಷ್ಣ —ಸನ್ಮಾನ್ಯ ಅಧ್ಯಕ್ಷರೇ, ಈಗ ೩೦ ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದಕ್ಕೆ ಭಾರತ ಸರಕಾರ ಸೂಚನೆ ನೀಡಿದೆ ಎಂದು ಹೇಳಿದ್ದೀರಿ. ಕೃಷ್ಣರಾಜ ಪೇಟೆ ತಾಲ್ಲೂಕು ಸಂತೇಬಾಚನ ಹಳ್ಳಿಯಲ್ಲಿ ಆರೋಗ್ಯ ಘಟಕ ಇದೆ. ಇದು ೫೦ ವರ್ಷಗಳ ಹಿಂದೆ ಸ್ಥಾಪನೆ ಯಾಗಿರತಕ್ಕಂಥದ್ದು. ಈ ಹಳ್ಳಿಯು ನಾಗಮಂಗಲ ಮತ್ತು ಕೆ. ಆರ್. ಪೇಟೆಯ ತಾಲ್ಲೂಕುಗಳ ಗಡಿಯಲ್ಲಿ ಇರುತ್ತದೆ. ಈ ಪ್ರದೇಶಗಳ ಸುತ್ತಮುತ್ತಲಿನ ಸುಮಾರು ೫೦ ಸಾವಿರ ಜನರು ಈ ಘಟಕಕ್ಕೆ ಬರುತ್ತಾರೆ. ಆ ಕಾರಣದಿಂದ ಇದನ್ನು ಆರೋಗ್ಯ ಕೇಂದ್ರವನ್ನಾಗಿ ಆದಷ್ಟು ಬೇಗ ಮಾಡಲು ಸರಕಾರದವರು ಕ್ರಮ ತೆಗೆದು ಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾವು ೧೫ ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಘಟಕವನ್ನು ತೆಗೆದಿದ್ದೇವೆ. ೧೫ ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಘಟಕದ ಆವಶ್ಯಕತೆ ಇಲ್ಲ. ೩೦ ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆಗೆಯಿರಿ ಎಂದು ಕೇಂದ್ರ ಸರಕಾರದವರು ಹೇಳುತ್ತಾ ಇದ್ದಾರೆ ಇದನ್ನು ನಾವು ಅನುಕೂಲಿಸಿದರೆ ನಮ್ಮ ಜನಕ್ಕೆ ತೊಂದರೆ ಆಗುತ್ತದೆಯೇ ಹೊರತು ಪ್ರಯೋಜನ ಆಗುವುದಿಲ್ಲ. ಈಗ ಸಂತೇಬಾಚನಹಳ್ಳಿಯಲ್ಲಿ ಆರೋಗ್ಯ ಘಟಕ ಇದೆ. ಮುಂದೆ ಕೇಂದ್ರ ಸರಕಾರದವರು ಹೆಚ್ಚಿನ ಹಣವನ್ನು ಒದಗಿಸುವುದಾದರೆ, ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಬಹುದು. ಸಂತೇಬಾಚನ ಹಳ್ಳಿಯಲ್ಲಿ ೧೦ ಹಾಸಿಗೆಗಳುಳ್ಳ ಹೆರಿಗೆ ಆಸ್ಪತ್ರೆಯನ್ನು ಮಾಡಬೇಕಾಗಿದೆ. ಆದರೆ ಅದಕ್ಕೋಸ್ಕರ ಸಾರ್ವಜನಿಕರು ಒಂದು ಲಕ್ಷ ರೂಪಾಯಿಗಳನ್ನು

ಮತ್ತು ಜಮೀನನ್ನು ಕೊಡಬೇಕಾಗುತ್ತದೆ. ಅದನ್ನು ಅವರು ಒದಗಿಸಿ ಕೊಟ್ಟರೆ ಈ ಉತ್ತಮವಾದಂತಹ ಕೆಲಸವನ್ನು ಮಾಡಬಹುದು ಎಂದು ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಸಾರ್ವಜನಿಕರು ಜಮೀನು ಮತ್ತು ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದಲ್ಲಿ, ಅಲ್ಲಿಗೆ ಹೆರಿಗೆ ಆಸ್ಪತ್ರೆಯನ್ನು ಮಂಜೂರು ಮಾಡಬಹುದು.

ಶ್ರೀ ಕೃಷ್ಣ.—ಮಾನ್ಯ ಸಚಿವರು ಹೆರಿಗೆ ಆಸ್ಪತ್ರೆಯನ್ನು ಮಾಡಿಸುವುದಕ್ಕೆ ಸೂಚನೆ ಕೊಟ್ಟಿದ್ದಾರೆ. ಬಹಳ ಸಂತೋಷದ ವಿಚಾರ ಅದು. ಆದರೆ ಸಂತೇಬಾಚನಹಳ್ಳಿ ತುಂಬಾ ಬರಡು ಪ್ರದೇಶವಾಗಿದೆ. ಮತ್ತು ಸುತ್ತಮುತ್ತಲಿನ ಪ್ರದೇಶಗಳೂ ಕೂಡಾ ನಾಗವಂಗಲ ತಾಲ್ಲೂಕಿಗೆ ಸೇರಿಕೊಂಡಿವೆ. ಪರಿಸ್ಥಿತಿ ಹೀಗಿರುವಾಗ ಮಾನ್ಯ ಸಚಿವರು ಹೇಳಿದ ಹಾಗೆ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡುವುದು ಕಷ್ಟಸಾಧ್ಯ ಮತ್ತು ಕೊಡುವುದಕ್ಕಾಗುವುದಿಲ್ಲ. ಐವತ್ತು ಸಾವಿರ ರೂಪಾಯಿಗಳನ್ನು ಅಲ್ಲಿಯ ಸಾರ್ವಜನಿಕರು ಕೂಡಿಸಿ ಕೊಟ್ಟರೆ, ಸರಕಾರದವರು ಮಂಜೂರು ಮಾಡಿ ಕೊಡುತ್ತಾರೆಯೇ ಎಂದು ಕೇಳಲಿಚ್ಛಿಸುತ್ತೇನೆ ಮತ್ತು ಮಂಜೂರು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಹೇಳಿದ ಹಾಗೆ ಸಾರ್ವಜನಿಕರು ೫೦ ಸಾವಿರ ರೂಪಾಯಿಗಳು ಮತ್ತು ಜಮೀನನ್ನು ಕೊಟ್ಟರೆ ಆರು ಹಾಸಿಗೆಗಳುಳ್ಳ ಹೆರಿಗೆ ಆಸ್ಪತ್ರೆ ಮಂಜೂರು ಮಾಡಬಹುದು, ಅಲ್ಲಿ ಮಹಿಳಾ ವೈದ್ಯರು ಇರುವುದಿಲ್ಲ. ನರ್ಸ್ ಇರುತ್ತಾರೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ಅದು ಸರಿಯಲ್ಲ. ಸದಸ್ಯರು ದುಡ್ಡು ಕಡಿಮೆ ಇದೆಯೆಂದು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳಬಹುದು. ಆದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಅಲ್ಲಿಯ ಸಾರ್ವಜನಿಕರೊಡನೆ ಸಮಾಲೋಚನೆ ಮಾಡಿ ಅವರಿಗೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳಬಹುದು ಎಂದು ಹೇಳಲಿಚ್ಛಿಸುತ್ತೇನೆ.

ರಾಜ್ಯದಲ್ಲಿ ಖಾಲಿ ಇರುವ ಮಹಿಳಾ ವೈದ್ಯರ ಹುದ್ದೆಗಳು

೨೧೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಮಹಿಳಾ ವೈದ್ಯರ ಸ್ಥಾನಗಳು ತೆರವಾಗಿವೆ?

ಆ) ಇವುಗಳ ಪೈಕಿ ಗ್ರಾಮಾಂತರ ಕ್ಷೇತ್ರಗಳಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು? ಹಾಗೂ ಇದಕ್ಕೆ ಕಾರಣಗಳೇನು?

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೧೩೬.

ಆ) ೧೩೬. ಮಹಿಳಾ ವೈದ್ಯರು ಸಾಕಷ್ಟು ಇಲ್ಲದಿರುವುದರಿಂದಲೂ ಮಹಿಳಾ ವೈದ್ಯರು ಗ್ರಾಮಾಂತರ ಪ್ರದೇಶಕ್ಕೆ ಹೋಗಲು ಹಿಂಜರಿಯುವುದರಿಂದಲೂ ಮತ್ತು ಕೆಳಿ ಮಂದಿ ಮಹಿಳಾ ವೈದ್ಯರು ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ ಇರುವುದರಿಂದಲೂ ಈ ಹುದ್ದೆಗಳು ಖಾಲಿ ಇವೆ.

ಇ) ಒಂದುನೂರು ಮಹಿಳಾ ವೈದ್ಯರ ಹುದ್ದೆಗಳನ್ನು ಆಯ್ಕೆಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಇದಲ್ಲದೆ ಸ್ನಾತಕೋತ್ತರ ಪದವಿ ಶಿಕ್ಷಣ ಮುಗಿಸಿಕೊಂಡು ಬರುವ ಮಹಿಳಾ ವೈದ್ಯರಿಂದ ಹಲವು ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಈಗ ತಾನೇ ಮಾನ್ಯ ಆರೋಗ್ಯ ಸಚಿವರು, ಗ್ರಾಮಾಂತರ ಪ್ರದೇಶಗಳಿಗೆ ಹೋಗಲು ಮಹಿಳಾ ವೈದ್ಯರು ಹಿಂಜರಿಯುತ್ತಾರೆ ಎಂದು ಹೇಳಿದ್ದಾರೆ. ಮತ್ತು ಕೆಳಿ ಮಂದಿ ಮಹಿಳಾ ವೈದ್ಯರು ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿದ್ದಾರೆ ಎಂದೂ ತಿಳಿಸಿದ್ದಾರೆ.ಸ್ನಾತಕೋತ್ತರ ಪದವಿ ಮುಗಿದ ಮೇಲೆ ಅಲ್ಲಿಗೆ ಹೋಗುತ್ತಾರೆ ಎಂದೂ ತಿಳಿಸಿದ್ದಾರೆ. ಹಳ್ಳಿ